<u>ದಿನಾಂಕಃ **23-11-2023** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪ್ರತಿವಾದಿ ಪರ ಪಾಟೀ ಸವಾಲು ಶ್ರೀ ಜಿ ಎನ್ ಎಸ್ ವಕೀಲರಿಂದಃ-</u>

1) ಈ ದಾವೆ ಹಾಕಲು ನಾನೇ ಮಾಹಿತಿ ನೀಡಿರುತ್ತೇನೆ. ದಾವಾ ಆಸ್ತಿಯು ಶಿಕಾರಿಪುರ ತಾಲೂಕಿನ ಅಪಿನಕಟ್ಟೆ ಗ್ರಾಮದಲ್ಲಿ ಇರುತ್ತದೆ. ದಾವಾ ಆಸ್ತಿಯು ನಾರಾಯಣರಾವ್ ಅವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ನಾವು ನಾರಾಯಣರಾವ್ ಅವರಿಂದ ದಾವಾ ಹಾಕಲು ಜಿ ಪಿ ಎ ಯನ್ನು ತೆಗೆದುಕೊಂಡಿರುವುದಿಲ್ಲ. ನಾರಾಯಣರಾವ್ ಮತ್ತು ನಾವು ಬೇರೆ ಸಮುದಾಯದವರು ಎಂದರೆ ಸರಿ. ನಾವು ನಾರಾಯಣ ರಾವ್ ಅವರಿಂದ ಖರೀದಿ ಪತ್ರ ಆಗಲೀ ಅಥವಾ ಬೇರೆ ಯಾವುದೇ ಪತ್ರ ಮಾಡಿಕೊಂಡಿಲ್ಲ ಎಂದರೆ ಸರಿ. ಸಾಕ್ಷಿಯು ಸುಮಾರು 50 ವರ್ಷದಿಂದ ಸಾಗುವಳಿ ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ನಾವು ಸುಮಾರು 50 ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದೇವೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇವೆ. ಕೈ ಪಹಣಿಗಳನ್ನು, ಕಂದಾಯ ರಶೀದಿಗಳನ್ನು ಹಾಜರುಪಡಿಸಿರುತ್ತೇವೆ. ನಿಶಾನೆ ಪಿ -1 ರಲ್ಲಿ ನಾರಾಯಣ ರಾವ್ ಅವರ ಹೆಸರು ಇರುತ್ತದೆ ಎಂದರೆ ಸರಿ, ಸಾಕ್ಷಿಯು ನನ್ನಹೆಸರು ಸಹ ಇರುತ್ತದೆ ಎಂದು ಹೇಳುತ್ತಾರೆ. ಬೇರೆಯವರ ಹೆಸರಿನಲ್ಲಿ ಯಾರು ಬೇಕಾದರೂ ಕಂದಾಯ ಕಟ್ಟಿಸಬಹುದು ಎಂದರೆ ಸರಿಯಲ್ಲ.

2) ನಾವು ಇತ್ತೀಚಿನ ದಾವಾ ಆಸ್ತಿಯ ಪಹಣಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಿಶಾನೆ ಪಿ-3 ಪಹಣಿ ಪತ್ರಿಕೆಯು ಬೇಗೂರು ಗ್ರಾಮಕ್ಕೆ ಸಂಬಂಧಿಸಿದ್ದು ಎಂದರೆ ಸರಿ. ದಾವಾ ಸ್ವತ್ತಿನ ಪೂರ್ವಕ್ಕೆ - ಹಳ್ಳ , ಪಶ್ಚಿಮಕ್ಕೆ - ನೂರ್ ಸಾಬ್ ಅವರ ಜಮೀನು, ಉತ್ತರಕ್ಕೆ - ರಾಮದಾಸ್ ನಾಯ್ಕ ರವರ ಜಮೀನು, ದಕ್ಷಿಣಕ್ಕೆ - ಲಕ್ಕಪ್ಪನವರ ಜಮೀನುಗಳು ಬರುತ್ತವೆ, ನಂತರ ರಸ್ತೆ ಬರುತ್ತದೆ.

3) ಪ್ರತಿವಾದಿ ನನಗೆ ಸಂಬಂಧಿಕನಾಗುವುದಿಲ್ಲ. ಪ್ರತಿವಾದಿಗೆ ಬೇಗೂರು ಗ್ರಾಮದಲ್ಲಿರುವ ಸರ್ವೆ ನಂ 504 ರಲ್ಲಿ 1 ಎಕರೆ 36 ಗುಂಟೆ ಜಮೀನು ಇರುತ್ತದೆ ಎಂದರೆ ಗೊತ್ತಿಲ್ಲ. ಸದರಿ ಜಮೀನನ್ನು ಪ್ರತಿವಾದಿಯು ನಾರಾಯಣ ಭಟ ಅವರಿಂದ ಖರೀದಿ ಮಾಡಿದ ಜಮೀನು ಎಂದರೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ಕಾಲವಕಾಶ ನೀಡಲಾಯಿತು.

(ತೆರೆದನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆ ಬೆರಳಚ್ಚು ಮಾಡಲಾಯಿತು. )

ಓ.ಹೇ.ಕೇ.ಸರಿ.ಇದೆ.

2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ .ಎಂ.ಎಫ್.ಸಿ. ಶಿಕಾರಿಪುರ.

ಪ್ರತಿವಾದಿಗಳು ಮತ್ತು ಪ್ರತಿವಾದಿ ಪರ ವಕೀಲರುಗೈರು ಹಾಜರಿದ್ದು ಪಾಟೀ ಸವಾಲು ಮುಂದೂಡಲು ಯಾವುದೇ ಸಕಾರಣ ಇಲ್ಲದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು

ಈಗಾಗಲೇ ಸಾಕಷ್ಟು ಕಾಲವಕಾಶ ನೀಡಿದ್ದು , ಆದ್ದರಿಂದ ಪಾಟೀ ಸವಾಲು ಮುಂದೂಡಲು ಯಾವುದೇ ಸಕಾರವಾದ ಕಾರಣ ಇಲ್ಲದೇ ಇದ್ದುದರಿಂದ ಪಾಟೀ ಸವಾಲು ಮುಕ್ತಾಯ ಎಂದು ತೆಗೆದುಕೊಳ್ಳಲಾಯಿತು.